ಕಾರ್ಯದರ್ಶಿಯವರು (ಕ.ವಿ.ಮಂ.) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರಿಂದ ಅಥವಾ ಮಾನ್ಯ ರಾಷ್ಟ್ರಪತಿಯವರಿಂದ ಸಂದರ್ಭಾನುಸಾರವಾಗಿ ಒಪ್ಪಿಗೆ ಪಡೆದ ವಿಧೇಯಕಗಳ 3ನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ವಿಧೇಯಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಸದರಿ ವಿಧೇಯಕಗಳನ್ನು ಸಭೆಯ ಮುಂದಿಡಲಾಯಿತು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : (1) ಮೈಸೂರು ಜಿಲ್ಲೆಯಲ್ಲಿ ಕರುಳುಬೇನೆ ರೋಗದಿಂದ 50 ಜನರ ಸಾವು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ ಮೈಸೂರು ನಗರವೂ ಸೇರಿದಂತೆ ಕರುಳುಬೇನೆ ರೋಗ ಬಹಳ ತೀವ್ರವಾಗಿದೆ. ಕಳೆದ ವರ್ಷ ಈ ರೋಗ ಬಂದು ಸುಮಾರು 40-50 ಜನ ಸಾವಿಗೀಡಾದರು. ಅದೇ ರೀತಿ ಈ ವರ್ಷವೂ ನಂಜನಗೂಡು, ಮೈಸೂರು ನಗರ ಇನ್ನೂ ಮುಂತಾದ ಕಡೆಗಳಲ್ಲಿ ಇದು ತೀವ್ರವಾಗಿ ಬಹಳ ಜನರು ಸತ್ತಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಸರ್ಕಾರ ಕ್ರಮ ಕೈಗೊಳ್ಳದೇ ಇದ್ದರೆ ಇದು ಬಹಳ ಅಪಾಯದ ಮಟ್ಟಕ್ಕೆ ಮುಟ್ಟುತ್ತದೆ. ಬಹಳ ಗಂಭೀರ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ನಾವು ಇದಕ್ಕೆ ಒಂದು ಪರಿಹಾರವನ್ನು ಶಾಶ್ವತವಾಗಿ ಕಂಡುಹಿಡಿಯದೇ ಹೋದರೆ ಪ್ರತಿವರ್ಷವೂ ಈ ರೋಗ ಬಂದು ಹಲವಾರು ಜನರು ಸಾಯುತ್ತಲೇ ಹೋಗುತ್ತಾರೆ. ಈ ಸಾಂಕ್ರಾಮಿಕ ರೋಗವನ್ನು ತಡೆಗಟ್ಟುವುದಕ್ಕೆ ಸರ್ಕಾರ ತೀವ್ರವಾಗಿ ಗಮನಹರಿಸಬೇಕು. ಈಗಾಗಲೇ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿರುವುದರ ಜೊತೆಗೆ ಮಾನ್ಯ ಮುಖ್ಯ ಮಂತ್ರಿಗಳಿಗೆ ಹಲವಾರು ವರದಿಗಳೂ ಕೂಡ ಬಂದಿವೆ. ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದ ವತಿಯಿಂದ ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂಬ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಈ ಸದನಕ್ಕೆ ಕೊಟ್ಟರೆ ಒಳ್ಳೆಯದು. ಜನರು ಬಹಳ ನೋವಿಗೆ ಈಡಾಗಿದ್ದಾರೆ, ಕರುಳು ಬೇನೆ ಬಹಳ ತೀವ್ರವಾಗಿ ಹಬ್ಬುತ್ತಿದೆ. ಈಗ ಕೇವಲ ಜಿಲ್ಲಾಮಟ್ಟದಲ್ಲಿರುವ ಈ ಸಾಂಕ್ರಾಮಿಕ ರೋಗ ಮುಂದೆ ರಾಜ್ಯಮಟ್ಟಕ್ಕೆ ಹೋಗುವ ಪರಿಸ್ಥಿತಿ ಬರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ದಯವಿಟ್ಟು ಹೇಳಬೇಕು.

ಅಧ್ಯಕ್ಷರು : ಎಲ್ಲ ಹೊರೆಯನ್ನೂ ನಾವು ಮಾನ್ಯ ಮುಖ್ಯಮಂತ್ರಿಗಳ ಮೇಲೆಯೇ ಹಾಕುವ ಬದಲು ಮಾನ್ಯ ಆರೋಗ್ಯ ಮಂತ್ರಿಗಳನ್ನು ಅವರು ತಮ್ಮ ಕಛೇರಿಗೆ ಕರೆಯಿಸಿಕೊಂಡು ಹೇಳಲಿ. ಈಗ ಮಾನ್ಯ ಆರೋಗ್ಯಮಂತ್ರಿಗಳು ಇಲ್ಲಿ ಬಂದಿಲ್ಲ.

ಶ್ರೀ ವಾಟಾಳ್ ನಾಗರಾಜ್ : (ಚಾಮರಾಜನಗರ) ತಮ್ಮಲ್ಲಿ ನನ್ನ ಒಂದು ಮನವಿ ಎಂದರೆ .....

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರು ಏನು ಹೇಳಿದರೋ ಅದನ್ನೇ ಮತ್ತೆ ನಾನೂ ಕೂಡ ಹೇಳಬೇಕಾಗುತ್ತದೆ. ಮಾನ್ಯ ಆರೋಗ್ಯ ಮಂತ್ರಿಗಳನ್ನೂ ಮತ್ತು ಮಾನ್ಯ ಆರೋಗ್ಯ ಇಲಾಖೆಯ ನಿರ್ದೇಶಕರನ್ನೂ ಕರೆಯಿಸಿಕೊಂಡು ತಾವು ಈಗ ಪ್ರಸ್ತಾಪಿಸಿರತಕ್ಕ ವಿಚಾರದಲ್ಲಿ ಸರ್ಕಾರದ ವತಿಯಿಂದ ಏನು ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬುದನ್ನು ಇವತ್ತು ಸಂಜೆಯೊಳಗಾಗಿ ತಮಗೆ ತಿಳಿಸುತ್ತೇನೆ.

2. ಮೆಡಿಕಲ್ ಮುತ್ತ ಇಂಜನಿಯರಿಂಗ್ ಕೋರ್ಸಿಗೆ ಸಂಬಂಧಪಟ್ಟ ಸಿ.ಇ.ಟಿ. ಪರೀಕ್ಷೆಯ ಮುಂದೂಡಿಕೆ ಕುರಿತು.

* ಶ್ರೀ ಬಿ. ಎಸ್. ಯಡಿಯೂರಪ್ಪ : ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ಮಾನ್ಯ ಉನ್ನತ ಶಿಕ್ಷಣ ಖಾತೆ ಮಂತ್ರಿಗಳಿದ್ದಾರೆ. ಅವರು ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ಒಂದು ಹೇಳಿಕೆಯನ್ನು ಕೊಟ್ಟು ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುವ ಸಲುವಾಗಿ ಸಿ.ಇ.ಟಿ. ಪರೀಕ್ಷೆಯನ್ನು ಈ ಸಾರಿಗೂ ಮುಂದುವರೆಸುತ್ತೇವೆಂದು ಹೇಳಿದ್ದಾರೆ. ನಾನಾದರೂ ಮಾನ್ಯ ಅಧ್ಯಕ್ಷರ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಸ್ಥಾವಿರಾರು ಜನ ವಿದ್ಯಾರ್ಥಿಗಳು ಈ ಸಾರಿ ಸಿ.ಇ.ಟಿ. ಪರೀಕ್ಷೆಯನ್ನು ಮಾಡುತ್ತಾರೋ ಅಥವಾ ಇಲ್ಲವೋ ಎಂಬ ಒಂದು ಗೊಂದಲದಲ್ಲಿ ಸಿಕ್ಕಿಕೊಂಡಿದ್ದಾರೆ. ನಾನಾದರೂ ಸರ್ಕಾರಕ್ಕೆ ಈ ಸಂದರ್ಭದಲ್ಲಿ ಸಲಹೆ ಕೊಡುವುದೆಂದರೆ ಪ್ರತಿಸಾರಿಯಂತೆ ಸಿ.ಇ.ಟಿ. ಪರೀಕ್ಷೆಯನ್ನು ಈ ಸಾರಿ ಕೂಡ ಮಾಡಿ. ಮುಂದಿನ ಸಾರಿಯಿಂದ ಇದರ ಬಗ್ಗೆ ಏನು ಮಾಡಬೇಕೆಂಬ ಬಗ್ಗೆ ಇಲ್ಲಿ ಒಂದು ವ್ಯಾಪಕವಾದ ಚರ್ಚೆಯನ್ನು ಮಾಡಿ ಒಂದು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಇದಲ್ಲದೇ ಹೋದರೆ ಬಹಳ ಕಷ್ಟವಾಗುತ್ತದೆ ಏಕೆಂದರೆ ಈ ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಸಿ.ಇ.ಟಿ. ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಸಿದ್ಧತೆಯನ್ನು ಇಷ್ಟು ಹೊತ್ತಿಗೆ ಮಾಡಿಕೊಳ್ಳಬೇಕಾಗಿತ್ತು, ಎಲ್ಲ ರೀತಿಯ ವ್ಯವಸ್ಥೆ ಆಗಬೇಕಾಗಿತ್ತು, ಡೇಟ್ ಕೂಡ ಅನೌನ್ಸ್ ಆಗಬೇಕಾಗಿತ್ತು. ಸುಮಾರು ಒಂದು ತಿಂಗಳ ಮುಂಚೆಯೇ ಈ ಸಂಬಂಧ ಎಲ್ಲಾ ತಯಾರಿ ಆಗಬೇಕಾಗಿತ್ತು. ಇದುವರೆಗೂ ಇದರ ಬಗ್ಗೆ ಅಂತಿಮ ನಿರ್ಧಾರ ಹೊರಬರಲಿಲ್ಲ. ಇದರಿಂದಾಗಿ ಮುಂದೆ ನಮ್ಮ ಭವಿಷ್ಯ ಏನಾಗಬಹುದೆಂಬ ಬಗ್ಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರು ಚಿಂತಾಕ್ರಾಂತವಾಗಿದ್ದಾರೆ. ನಾವು ಗಡಿಬಿಡಿಯಲ್ಲಿ ಇದರ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಿಂತ, ಅಲ್ಲಿ ಏನು ಲೋಪದೋಷವಾಗಿದೆ ಅದನ್ನು ಸರಿಪಡಿಸುವುದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು, ಸರ್ಕಾರ ಶಕ್ತಿಯುತವಾಗಿದ್ದಾರೆ. ಮುಂದೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡೋಣ. ಈಗಾಗಲೇ ಮಾನ್ಯ ಉನ್ನತ ಶಿಕ್ಷಣ ಖಾತೆ ಮಂತ್ರಿಗಳು ವಿಧಾನ ಪರಿಷತ್ತಿನಲ್ಲಿ ಹೇಳಿಕೆಯನ್ನು ಕೊಟ್ಟಿರುವುದರಿಂದ ಸಿ.ಇ.ಟಿ. ಪರೀಕ್ಷೆಯ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆಯನ್ನು ಕೊಟ್ಟರೆ ವಿದ್ಯಾರ್ಥಿಗಳು ಮುಂದೆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.